ಅ) ಕರ್ನಾಟಕ ಪ್ರವಾಸೋದ್ಯಮ ಇಲಾಖೆ 2008–09ನೆ ಸಾಲಿನಲ್ಲಿ ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಕೈಗೊಂಡ ಯೋಜನೆಗಳು ಯಾವುವು; ಅವುಗಳಿಗೆ ವೆಚ್ಚ ಮಾಡಿರುವ ಹಣವೆಷ್ಟು (ಸಂಪೂರ್ಣ ವಿವರ ನೀಡುವುದು);

2008–09ನೇ ಸಾಲಿನಲ್ಲಿ ಇಲಾಖೆಯು ಪ್ರವಾಸೋದ್ಯಮ ಅಭಿವೃದ್ಧಿಗಾಗಿ ವೆಚ್ಚ ಮಾಡಿದ ವಿವರಗಳು ಈ ಕೆಳಕಂಡಂತಿವೆ.

1. ಪ್ರವಾಸೋದ್ಯಮ ಪ್ರಚಾರ/ಜಾಹೀರಾತು/ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರವಾಸಿ ಮೇಳಗಳಲ್ಲಿ ಭಾಗವಹಿಸುವಿಕೆ ಇತ್ಯಾದಿ ಯೋಜನೆಗಳಿಗೆ ರೂ.1300.00 ಲಕ್ಷಗಳನ್ನು ಒದಗಿಸಲಾಗಿದ್ದು, ಇದರಲ್ಲಿ ಇಲ್ಲಿಯವರೆಗೆ ರು.1255.41 ಲಕ್ಷಗಳನ್ನು ವೆಚ್ಚಮಾಡಲಾಗಿದೆ.

2. ಪ್ರವಾಸೋದ್ಯಮ ಮೂಲಸೌಕರ್ಯಗಳ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ರಾಜ್ಯದ ವಿವಿಧ ಪ್ರವಾಸಿ ಸ್ಥಳಗಳಲ್ಲಿ ವಸತಿಗಳು/ಶೌಚಾಲಯಗಳು/ಯಾತ್ರಿ ನಿವಾಸಗಳು ಇತ್ಯಾದಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ರೂ.2662.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು ಈ ಅನುದಾನದಲ್ಲಿ 77 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಈವರೆಗೆ ರೂ.2224.00 ಲಕ್ಷಗಳು ವೆಚ್ಚವಾಗಿರುತ್ತವೆ.

3. ಕೇಂದ್ರ ಧನಸಹಾಯದ ಅಡಿಯಲ್ಲಿ ಕಲ್ಪಿಸಲಾಗುವ ಪ್ರವಾಸಿ ಸೌಲಭ್ಯಗಳಿಗಾಗಿ ಈ ಸಾಲಿನಲ್ಲಿ ರೂ.1000.00 ಲಕ್ಷಗಳನ್ನು ಒದಗಿಸಲಾಗಿದ್ದು ಈ ಅನುದಾನದ ಪೈಕಿ ಈವರೆಗೆ 10 ಯೋಜನೆಗಳಿಗೆ ರೂ.9790.51 ಲಕ್ಷಗಳನ್ನು ವೆಚ್ಚಮಾಡಲಾಗಿದೆ.

4. ಜಿಲ್ಲಾಮಟ್ಟದಲ್ಲಿ ಪ್ರವಾಸಿ ಉತ್ಸವಗಳ ಆಚರಣೆಗಾಗಿ ರೂ.30.00 ಲಕ್ಷಗಳನ್ನು ಒದಗಿಸಲಾಗಿದ್ದು, ಈವರೆಗೆ 16 ಉತ್ಸವಗಳಿಗಾಗಿ ರು.26.53 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಆ) ಶಿರಾ ತಾಲೂಕಿನಲ್ಲಿ ತೆಗೆದುಕೊಂಡಿರುವ ಯೋಜನೆಗಳು ಯಾವುವು: ಈ ಯೋಜನೆಗಳಿಗೆ ನೀಡಿರುವ ಹಣವೆಷ್ಟು?

ಶಿರಾ ತಾಲುಕಿನ ಪಟ್ಟನಾಯಕನ ಹಳ್ಳಿಯಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ರೂ.12.40 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಶಿರಾ ಕೋಟೆ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ನಿರ್ಮಿಸಲು ರೂ.25.00 ಲಕ್ಷಗಳನ್ನು ರಾಜ್ಯ ಪುರಾತತ್ವ ಇಲಾಖೆಗೆ ಬಿಡುಗಡೆ ಮಾಡಲಾಗುತ್ತಿದೆ.

87 ಶ್ರೀ ಜಯಚಂದ್ರ ಟಿ.ಬಿ.(ಸಿರಾ)

ಡಾ:ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು)

ಅ) ಮರಳು ಸಾಗಾಣಿಕೆಗಾಗಿ ತಾತ್ಕಾಲಿಕ ಪರವಾನಗಿ ನೀಡುವ ಪದ್ಧತಿ ಜಾರಿಯಲ್ಲಿದ್ದು, ಪರ್ಮಿಟ್ ನಿಡುವಲ್ಲಿ ದುರುಪಯೋಗಪಡಿಸಿಕೊಂಡು ಇತಿಹಾಸ ಪ್ರಸಿದ್ಧ ತಲಕಾಡು, ಶಿರ, ಗೌರಿಬಿದನೂರು ಹಾಗೂ ಇನ್ನೂ ಅನೇಕ ಸ್ಥಳಗಳಲ್ಲಿ

ನಿರಂತರವಾಗಿ ಮರಳು ಲೂಟಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ತಲಕಾಡು ಗ್ರಾಮದ ಸುತ್ತ 3 ಕಿ.ಮೀ. ವ್ಯಾಪ್ತಿಯಲ್ಲಿ ಮರಳು ಗಣಿಗಾರಿಕೆ ನಿಷೇದಿಸಿದ್ದು, ಈ ಪ್ರದೇಶದಲ್ಲಿ ಮರಳು ಎತ್ತಲು ತಾತ್ಕಾಲಿಕ ಪರವನಗಿಗಳನ್ನು ನೀಡಲಾಗುತ್ತಿಲ್ಲ. ಶಿರಾ ತಾಲ್ಲೂಕಿನಲ್ಲಿ 114 ಲಾರಿಗಳಿಗೆ ತಾತ್ಕಾಲಿಕ ಪರವಾನಗಿಗಳನ್ನು ನೀಡಲಾಗಿರುತ್ತದೆ. ಈ ತಾಲ್ಲೂಕಿನಲ್ಲಿ ಪರವಾನಗಿ ಇಲ್ಲದೆ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿದ್ದ ವಾಹನಗಳನ್ನು ತಡೆದು ರೂ. 1,07,100 ಗಳ ದಂಡವನ್ನು ವಸೂಲಿ ಮಾಡಲಾಗಿದೆ. ಗೌರಿಬಿದನೂರು ತಾಲೂಕಿನಲ್ಲಿಮರಳಿನ ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ಜಿಲ್ಲಾಡಳಿತವು ನಿಷೇದಿಸಿರುವುದರಿಂದ ತಾತ್ಕಾಲಿಕ ಪರವಾನಗಿಗಳನ್ನು ನೀಡಿರುವುದಿಲ್ಲ. ಈ ತಾಲ್ಲೂಕಿನಲ್ಲಿ ಪರವಾನಗಿ ಇಲ್ಲದೆ ಅನಧಿಕೃತವಾಗಿ ಮರಳು ಸಾಗಾಣಿಕೆ ಮಾಡುತ್ತಿದ್ದ 23 ವಾಹನಗಳನ್ನು ಹಿಡಿದು ವಾಹನ ಮಾಲಿಕರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಅಲ್ಲದೇ ರೂ. 98,000ಗಳ ದಂಡವನ್ನು ವಿಧಿಸಲಾಗಿದೆ.

ಆ) ಅಂತರ್ ಜಲದ ದೃಷ್ಟಿಯಿಂದ ಪರಿಸರ ಮತ್ತು ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರ ಮನಗಂಡಿದೆಯೇ;

ಈ ಕುರಿತು ಕೇಂದ್ರ ಅಂತರ್ಜಲ ಮಂಡಳಿಯು ಅಧ್ಯಯನ ನಡೆಸಿ ವರದಿ ನೀಡಿದ್ದು, ಸದರಿ ವರದಿಯ ಅನ್ವಯ 1 ಮೀಟರ್ ಆಳದವರೆಗೆ ಮರಳು ತೆಗೆದಲ್ಲಿ ಅಂತರ್ಜಲದ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಉಂಟಾಗುವುದಿಲ್ಲ. ಅಂತೆಯೇ ಮರಳು ಗುತ್ತಿಗೆ ಕರಾರಿನಲ್ಲಿ ಮರಳು ಗಣಿಗಾರಿಕೆಯನ್ನು 1 ಮೀಟರ್ ಆಳದ ವರೆಗೆ ಮಾತ್ರ ಸೀಮಿತಗೊಳಿಸಲು ಷರತ್ತನ್ನು ದಿ: 06.08.2005ರ ಆದೇಶ ಸಂಖ್ಯೆ:ಸಿಐ.05.ಎಂ.ಎಂ.ಎನ್.2005, ರಲ್ಲಿ ವಿಧಿಸಲಾಗಿದೆ.

ಇ) ಮರಳು ದಂಧೆಯನ್ನು ನಿಯಂತ್ರಿಸಲು ಸರ್ಕಾರ ಸಮರ್ಪಕ ಕಾರ್ಯಕ್ರಮ ಹಾಕುವುದೇ?

ಅಕ್ರಮ ಮರಳು ಸಾಗಾಣಿಕೆ ನಿಯಂತ್ರಿಸಲು ಜಿಲ್ಲಾ ಮಾನಿಟರಿಂಗ್ ಸಮಿತಿ ವತಿಯಿಂದ ಜಂಟಿ ಕಾರ್ಯಚಾರಣೆ ನಡೆಸಲಾಗುತ್ತಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಮೂರು ಚಾಲಿತ ತನಿಖಾ ದಳಗಳನ್ನು ರಚಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ರಾಜ್ಯಾದ್ಯಂತ ಅಕ್ರಮ ಮರಳು ಸಾಗಾಣಿಕೆ ಮಾಡುತ್ತಿದ್ದ 45,309 ವಾಹನಗಳನ್ನು ತಪಾಸಣೆ ಮಾಡಿ 373 ವಾಹನಗಳ ವಿರುದ್ಧ ಮೊಕದ್ದಮೆ ದಾಖಲಿಸಿ ಒಟ್ಟು ರೂ. 85.68 ಲಕ್ಷ ದಂಡ ವಸೂಲಿ ಮಾಡಲಾಗಿದೆ. ನ್ಯಾಯಾಲಯಗಳಲ್ಲಿರುವ ತಡೆಯಾಜ್ಞೆಗಳನ್ನು ತೆರವುಗೊಳಿಸಿ ಬೇಡಿಕೆಗನುಗುಣವಾಗಿ ಹೆಚ್ಚು ಪ್ರದೇಶಗಳಲ್ಲಿ ಮರಳು ಹರಾಜು ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.